ದಿನಾಂಕ 20.09.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎ ಆರ್ ಡಿ ಎಸ್ ವಕೀಲರಿಂದ

ನಾನು ಕಳ್ಳಿಗೆ ಗ್ರಾಮದ ನೆತ್ತರಕೆರೆಯಲ್ಲಿ ಹುಟ್ಟಿ ಬೆಳೆದಿದ್ದೇನೆ. ವಾದಿ ಸಹ ಅದೇ ಊರಿನವರು. ನನಗೆ ಬಾಲ ಚಂದ್ರನ ಪರಿಚಯ ಇದೆ. ನಾನು ವಿದೇಶದಲ್ಲಿ ಕರ್ಜೂರದ ತೋಟದಲ್ಲಿ 4 ವರ್ಷ ಕೆಲಸ ಮಾಡಿದ್ದೇನೆ. ಅಲ್ಲಿಂದ ಬಂದ ನಂತರ ಮಂಗಳೂರಿನ ಊರ್ವ ಮಾರ್ಕೇಟ್ ನಲ್ಲಿ ಮನೆ ಮಾಡಿಕೊಂಡ ವಾಸವಾಗಿದ್ದೇನೆ ಎಂದರೆ ಸರಿ. ಸಾಕ್ಷಿಯು ಸದರಿ ಮನೆಯನ್ನು ನನ್ನ ಮತ್ತು ನನ್ನ ಹೆಂಡತಿಯ ಹೆಸರಿಗೆ ನನ್ನ ಭಾವ 2004 ರಲ್ಲಿ ಮಾರಾಟ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಸದರಿ ಜಾಗವನ್ನು ನಾವು ಹಣ ಕೊಟ್ಟು ಖರೀದಿ ಮಾಡಿದ್ದೇವೆ ಎಂದರೆ ಸರಿ . ನಾನು ವಾಸವಿರುವ ಮನೆ ಅದು ದಾವಾ ಸ್ವತ್ತಿನಲ್ಲಿ ಇರುವ ಮನೆ ಸುಮಾರು 20 ಕಿ.ಮೀ ದೂರ ಇದೆ . ದಾವಾ ಸ್ವತ್ತಿನಲ್ಲಿ ನಾನು ಯಾವುದೇ ಕೃಷಿ ಮಾಡಿಲ್ಲ ಎಂದರೆ ಸರಿ . ಅವು ಪಾಳು ಬಿದ್ದಿವೆ. ಸದರಿ ಜಾಗಕ್ಕೆ 6 ಮೀಟರ್ ಅಗಲದ ಸಂಪರ್ಕ ರಸ್ತೆ ಇದೆ . ಸದರಿ ರಸ್ತೆಯು ವಾದಿಯ ಜಾಗಕ್ಕೆ ತಾಗಿಕೊಂಡು ಇದೆ. ಸದರಿ ರಸ್ತೆ ಮುಸ್ಲಿಮರ ಜಾಗದಲ್ಲಿ ಇದೆ. ಈ ಬಗ್ಗೆ ನನ್ನಲ್ಲಿ ದಾಖಲೆ ಇಲ್ಲ. ದಾವಾ ಸ್ವತ್ತಿಗೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ.

2. ಮಂಗಳೂರಿಗೆ ಹೋದ ನಂತರ ನಾನು ವಾದಿಯನ್ನು ಬೇಟಿಯಾಗಿಲ್ಲ. ಸಾಕ್ಷಿಯು ನಿಪಿ-12 ರಲ್ಲಿ ರುವ ತನ್ನ ಸಹಿಗಳನ್ನು ಗುರುತಿಸಿದ್ದಾರೆ . ಸಂದೇಶ ಡಿಸೋಜಾ ನನ್ನ ಮಗ . ಅವನು ನಿಡಿ-12 ರ ಸಾಕ್ಷಿದಾರ . ಸಾಕ್ಷಿಯು ನಿಪಿ-12 ರಲ್ಲಿ ರುವ ಅವನ ಮಗನ ಸಹಿಗಳನ್ನು ಗುರುತಿಸಿದ್ದಾರೆ . ಅವನು ಪದವಿದರ . ಅವನಿಗೆ ಕನ್ನಡ ಇಂಗ್ಲಿಷ ಓದಲು ಬರೆಯಲು ಬರುತ್ತದೆ ಎಂದರೆ ಸಾಕ್ಷಿಯು ಕನ್ನಡ ಬರುವುದಿಲ್ಲ ಎನ್ನುತ್ತಾರೆ.

ಅವನು ತನ್ನ ಪ್ರಾಥಮಿಕ ಶಿಕ್ಷಣವನ್ನು ಮಂಗಳೂರಿನಲ್ಲಿ ಓದಿರುತ್ತಾನೆ. ಕರ್ನಾಟಕದಲ್ಲಿ 1 ರಿಂದ 7 ನೇ ತರಗತಿಯಲ್ಲಿ ಕನ್ನಡ ಓದಬೇಕು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನು ಕನ್ನಡ ಓದಲು ಬರೆಯಲು ಬರುತ್ತಿದ್ದರು ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ, ದ.ಕ.

ಪಾಟೀ ಸವಾಲುಃ ಪ್ರತಿವಾದಿಯವರು ಏಕಪಕ್ಷೀಯವಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಾಕಾಶ ಕೇಳಿದ್ದು ಪ್ರಕರಣವನ್ನು ಮುಂದುಡಲಾಗಿದೆ.

ಪ್ರತಿವಾದಿಯರು ನೀಡಿರುವ ಹಿಂಬರಹವನ್ನು ನಿಪಿ- ಎಂದೂ, ಪ್ರತಿವಾದಿಯರಿಗೆ ವಕೀಲರ ಮುಖಾಂತರ ನಾನು ನೀಡಿದ ನೋಟಿಸ ಪ್ರತಿಯನ್ನು ನಿಪಿ-5 ಎಂದೂ, ಆ ಬಗೆಗಿನ ಅಂಚೆ ರಶೀದಿಗಳನ್ನು 5 ಎ ಮತ್ತು 5 ಬಿ ಸ್ವೀಕೃತಿ ಪ್ರತಿಗಳನ್ನು 5ಸಿ ಮತ್ತು 5ಡಿ ಎಂದೂ ಗುರುತಿಸಲಾಯಿತು.